# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ**

ನಂ. 09, 2ನೇ ಮಹಡಿ, 1ನೇ ಮುಖ್ಯರಸ್ತೆ, (ಹೊರವರ್ತುಲ ರಸ್ತೆ),ಕೆಂಗೇರಿ ಉಪನಗರ,ಬೆಂಗಳೂರು-60.

**ಸಂಖ್ಯೆ : ಸ.ಇಂ/ವಾ-33/ವಾರ್ಡ್‌ಸಭೆ/2022-23** **ದಿನಾಂಕ : 07.11.2022**

## ವಾರ್ಡ್-33(ಕೆಂಗೇರಿ)ರ ವಾರ್ಡ್ ಸಭೆಯ ನಡವಳಿ.

ದಿನಾಂಕ: 07/11/2022 ರಂದು ಕೆಂಗೇರಿ ಉಪ ವಿಭಾಗ ವಾರ್ಡ್-33ರ ವಾರ್ಡ್ ಕಛೇರಿಯಲ್ಲಿ ಶ್ರೀ ಕೆ.ಆರ್.ಸತೀಶ್ ಕುಮಾರ್, ಕಂದಾಯ ಅಧಿಕಾರಿ, ರಾರಾನಗರ ಉಪವಲಯ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ಹಾಜರಿದ್ದವರು:

| ಕ್ರ ಸಂ | ಸದಸ್ಯರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ ಕೆ.ಆರ್.ಸತೀಶ್ ಕುಮಾರ್ | ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಕಂದಾಯ ಅಧಿಕಾರಿ, ರಾರಾನಗರ ಉಪವಲಯ, ಬಿ.ಬಿ.ಎಂ.ಪಿ | ಹಾಜರಿದ್ದರು |
| 2. | ಶ್ರೀ ಎನ್.ನಟರಾಜ | ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ.33, ಕೆಂಗೇರಿ | ಹಾಜರಿದ್ದರು |
| 3. | ಶ್ರೀ ರಾಹುಲ್ ರಾಥೋಡ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು |
| 4. | ಶ್ರೀ ಹೆಚ್.ಎಂ. ತಿಮ್ಮಪ್ಪ | ಸಹಾಯಕ ಅಭಿಯಂತರರು, ಯೋಜನಾ ವಿಭಾಗ, ಬಿಬಿಎಂಪಿ | ಹಾಜರಿದ್ದರು |
| 5. | ಶ್ರೀ ಚಂದ್ರಶೇಖರ್ | ಕಿರಿಯ ಅಭಿಯಂತರರು ಬೆಸ್ಕಾಂ, ಕೆಂಗೇರಿ | ಹಾಜರಿದ್ದರು |
| 6. | ಶ್ರೀ ಆರ್. ದ್ವಾರಕಾ ನಾಥ್ | ಸಂಚಾರಿ ಪೋಲೀಸ್ ಕೆಂಗೇರಿ ಪೊಲೀಸ್ ಠಾಣೆ | ಹಾಜರಿದ್ದರು |
| 7. | ಶ್ರೀಮತಿ ಗೀತಾ | ಕಂದಾಯ ಪರಿವೀಕ್ಷಕರು ಕೆಂಗೇರಿ ಉಪವಲಯ, ಬಿ.ಬಿ.ಎಂ.ಪಿ | ಹಾಜರಿದ್ದರು |
| 8. | ಶ್ರೀ ನವೀನ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ, ಬಿಬಿಎಂಪಿ | ಹಾಜರಿದ್ದರು |



Scanned with CamScanner

| ಕ್ರಸಂ | ಸಭೆಗೆ ಗೈರು ಹಾಜರಾದ ಅಧಿಕಾರಿಗಳು | ಇಲಾಖೆ |
|---|---|---|
| 1. | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ, ರಾರಾನಗರ ವಲಯ |
| 2. | ವಲಯ ಅರಣ್ಯ ಅಧಿಕಾರಿಗಳು | ಅರಣ್ಯ ಇಲಾಖೆ, ಬಿ.ಬಿ.ಎಂ.ಪಿ, ರಾಜರಾಜೇಶ್ವರಿನಗರ ವಲಯ, |
| 3. | ತೋಟಗಾರಿಕಾ ಅಧಿಕ್ಷಕರು | ತೋಟಗಾರಿಕೆ ಇಲಾಖೆ, ಬಿಬಿಎಂಪಿ, ರಾಜರಾಜೇಶ್ವರಿನಗರ ವಲಯ, |
| 4. | ಠಾಣಾಧಿಕಾರಿಗಳು ಉಲ್ಲಾಳು ಪೊಲೀಸ್ ಠಾಣೆ | ಆರ್.ಟಿ.ಓ |
| 5. | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ಬೀದಿ ದೀಪ ನಿರ್ವಹಣೆ, ರಾರಾನಗರ ವಲಯ, ಬಿಬಿಎಂಪಿ |
| 6. | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ಬೃಹತ್ ನೀರುಗಾಲುವೆ ವಿಭಾಗ ರಾರಾನಗರ ವಲಯ, ಬಿಬಿಎಂಪಿ |

ವಾರ್ಡ್ ಸಮಿತಿಯ ಕಾರ್ಯದರ್ಶಿರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಗೂ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಿ, ಸಭೆಯಲ್ಲಿ ವಾರ್ಡ್‌ನಲ್ಲಿ ಕುಂದು ಕೊರತೆಯ ಬಗ್ಗೆ ಚರ್ಚಿಸಲು ಮನವಿ ಮಾಡಲಾಯಿತು.

1) ಶ್ರೀ ಕದರಪ್ಪ, ನಾಗರೀಕರು ಸಭೆಯಲ್ಲಿ ಮಾತನಾಡಿ ವಾರ್ಡ್ ನಂ.33, ಕೆಂಗೇರಿ ವ್ಯಾಪ್ತಿಯಲ್ಲಿ ಬರುವ ವಳಗೇರಹಳ್ಳಿ ಬಸ್ ನಿಲ್ದಾಣ ಹಾಗೂ ಇತರೆ ರಸ್ತೆಗಳಲ್ಲಿ ಉಂಟಾಗಿರುವ ರಸ್ತೆ ಗುಂಡಿಗಳನ್ನು ಮುಚ್ಚುಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಕೋರಿದರು.

ಈ ಬಗ್ಗೆ ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡಿ ಈ ವಾರ್ಡ್ ನಂ.33(ಕೆಂಗೇರಿ) ವ್ಯಾಪ್ತಿಯಲ್ಲಿ ಬರುವ ವಳಗೇರಹಳ್ಳಿ ಬಸ್ ನಿಲ್ದಾಣ ಹಾಗೂ ಇತರೆ ರಸ್ತೆಗಳನ್ನು ಅಮೃತ ನಗರೋತ್ಥಾನ ಅನುದಾನದಡಿಯಲ್ಲಿ ಕೆಲವು ರಸ್ತೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.



Scanned with CamScanner

2) ವಾರ್ಡ್ ನಂ.33ರ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಅಕ್ಕಪಕ್ಕದಲ್ಲಿರುವ ಒಣಗಿರುವ ಮರಗಳ ಕೊಂಬೆಗಳನ್ನು ಕತ್ತರಿಸಿ ತೆರವುಗೊಳಿಸದೇ ಹಾಗೇ ಬಿಟ್ಟಿರುವುದರಿಂದ ಪಾದಾಚಾರಿಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು.

ಈ ಸಂಬಂಧ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ನಂ.33, ಕೆಂಗೇರಿ ವ್ಯಾಪ್ತಿಉಯಲ್ಲಿ ರಸ್ತೆಗಳ ಅಕ್ಕಪಕ್ಕದಲ್ಲಿರುವ ಮರಗಳ ಒಣಗಿದ ಕೊಂಬೆಗಳನ್ನು ಕತ್ತರಿಸಿ ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಯವರಿಗೆ ಕ್ರಮವಹಿಸಲು ಸೂಚಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

3) ವಾರ್ಡ್‌ನ ನಾಗರೀಕರು ಸಭೆಯಲ್ಲಿ ಮಾತನಾಡಿ ವಾರ್ಡ್ ನಂ.33, ಕೆಂಗೇರಿ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಸರಿಯಾಗಿ ಅಳವಡಿಸದೇ ಇರುವುದರಿಂದ ರಾತ್ರಿ ವೇಳೆಯಲ್ಲಿ ಬೀದಿ ದೀಪಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ತಿಳಿಸಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಗುತ್ತಿಗೆದಾರರು (ವಿದ್ಯುತ್) ರವರಿಗೆ ಹಾಗೂ ಸಂಬಂಧಪಟ್ಟ ಸ.ಕಾ.ಅ(ವಿದ್ಯುತ್),ರಾರಾನಗರ ವಲಯ ರವರಿಗೆ ಸದರಿ ಸಮಸ್ಯೆಯನ್ನು ಬಗೆಹರಿಸಲು ಕ್ರಮವಹಿಸುವಂತೆ ಸಭೆಯಲ್ಲಿ ತಿಳಿಸಿದರು.

4) ವಾರ್ಡ್ ನಂ.33, ಕೆಂಗೇರಿ ವ್ಯಾಪ್ತಿಯಲ್ಲಿ ಬರುವ ಕೆಂಗೇರಿ ಕೆರೆಗೆ ಸೆಕ್ಯೂರಿಟಿ ಗಾರ್ಡ್‌ಗಳನ್ನು ನಿಯೋಜಿಸುವಂತೆ, ಸದರಿ ಕೆರೆಯ ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಿಲ್ಲವೆಂದು ಹಾಗೂ ತ್ಯಾಜ್ಯ ನೀರು ಕೆರೆಗೆ ಸೇರುತ್ತಿದೆ ಎಂದು ಎಂ.ಟಿ.ಎಸ್ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಕದರಪ್ಪರವರು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಸ.ಕಾ.ಅ(ಕೆರೆಗಳ ವಿಭಾಗ), ರಾರಾನಗರ ವಲಯರವರಿಗೆ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

5) ವಾರ್ಡ್ ನಂ.33, ಕೆಂಗೇರಿ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಇರುವುದರಿಂದ, ಉದ್ಯಾನವನಗಳ ಗೇಟ್‌ಗಳು ಮತ್ತು ಉದ್ಯಾನವನಗಳಿಗೆ ಅಳವಡಿಸಿರುವ ಫೆನ್ಸಿಂಗ್ ಹಾಳಾಗಿರುತ್ತವೆ. ಆದುದರಿಂದ ಉದ್ಯಾನವನಗಳನ್ನು ಸರಿಯಾಗಿ ನಿರ್ವಹಣೆ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವಂತೆ ನಾಗರೀಕರು ಹಾಗೂ ವಾರ್ಡ್ ಸಮಿತಿ ಸದಸ್ಯರು ಸಭೆಯಲ್ಲಿ ಕೋರಿದರು.



Scanned with CamScanner

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಸ.ಕಾ.ಅ(ಯೋಜನಾ ವಿಭಾಗ) ರವರಿಗೆ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

6) ವಾರ್ಡ್ ನಂ.33, ಕೆಂಗೇರಿ ವ್ಯಾಪ್ತಿಯಲ್ಲಿ ಬರುವ ಕೆಂಗೇರಿ ಉಪನಗರ ಶ್ರೀ ರಾಘವೇಂದ್ರ ಸ್ವಾಮಿ ಮಠದ ಬಳಿ ಘನತ್ಯಾಜ್ಯ ವಿಲೇವಾರಿ ಸರಿಯಾಗಿ ಆಗುತ್ತಿಲ್ಲ ಹಾಗೂ ರಸ್ತೆಗಳನ್ನು ಸರಿಯಾಗಿ ಗುಡಿಸುತ್ತಿಲ್ಲವೆಂದು ಸ್ಥಳೀಯ ನಿವಾಸಿಗಳು ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಮುಂದಿನ ದಿನಗಳಲ್ಲಿ ಸದರಿ ರಸ್ತೆಗಳಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ನೋಡಲ್ ಅಧಿಕಾರಿ ಶ್ರೀ ಕೆ.ಆರ್. ಸತೀಶ್‌ಕುಮಾರ್ ರವರು ಮಾತನಾಡಿ ಮುಂದಿನ ಸಭೆಗೆ ಕೆಲ ಅಧಿಕಾರಿಗಳು ಗೈರುಹಾಜರಾಗಿದ್ದ ಅಧಿಕಾರಿ ಸಿಬ್ಬಂದಿಗಳನ್ನು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ಪತ್ರದಲ್ಲಿ ತಿಳಿಸುವಂತೆ ಕಾರ್ಯದರ್ಶಿರವರಿಗೆ ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲು ಸೂಚಿಸಿದರು.

ಅದರಂತೆ ಕಾರ್ಯದರ್ಶಿಗಳು ಸಭೆಗೆ ಹಾಜರಿದ್ದ ಅಧಿಕಾರಿ/ಸಿಬ್ಬಂದಿವರ್ಗದವರು ಹಾಗೂ ಸಾರ್ವಜನಿಕರಿಗೆ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ವೆಂಕಟರಾಜು)
ಕಾರ್ಯದರ್ಶಿ
ಸ.ಅ. ವಾರ್ಡ್ ನಂ.33, ಕೆಂಗೇರಿ

(ಕೆ.ಆರ್.ಸತೀಶ್ ಕುಮಾರ್)
ಕಂದಾಯ ಅಧಿಕಾರಿ
ಹಾಗೂ ವಾರ್ಡ್ ಸಮಿತಿ ಸಭೆ ಅಧ್ಯಕ್ಷರು
ವಾರ್ಡ್‌ನಂ. -33, ಕೆಂಗೇರಿ

ರವರಿಗೆ,

1) ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ ರವರ ಕಛೇರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) ಸಹಾಯಕ ಕಂದಾಯ ಅಧಿಕಾರಿ ಅಧಿಕಾರಿಗಳು, ಕೆಂಗೇರಿ ವಲಯ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘ.ತ್ಯಾ.ನಿ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
5) ಪೊಲೀಸ್ ಇನ್ಸ್‌ಪೆಕ್ಟರ್, ಕೆಂಗೇರಿ ಪೊಲೀಸ್ ಠಾಣೆ (ಕಾನೂನು ಸುವ್ಯವಸ್ಥೆ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
6) ಪೊಲೀಸ್ ಇನ್ಸ್‌ಪೆಕ್ಟರ್, ಕೆಂಗೇರಿ ಪೊಲೀಸ್ ಠಾಣೆ (ಸಂಚಾರಿ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.



Scanned with CamScanner

7) ಆರೋಗ್ಯ ಅಧಿಕಾರಿ, ಕೆಂಗೇರಿ, ಕೆಂಗೇರಿ ಉಪನಗರ ಪ್ರಾ.ಆ.ಕೇಂದ್ರ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.

8) ಸಹಾಯಕ ಇಂಜಿನಿಯರ್, ಬೆಸ್ಕಾಂ ಕೆಂಗೇರಿ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.

9) ಸಹಾಯಕ ಇಂಜಿನಿಯರ್ ಬಿ.ಡಬ್ಲ್ಯೂ.ಎಸ್. ಎಸ್.ಬಿ., ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.

10) ತೋಟಗಾರಿಕಾ ಅಧೀಕ್ಷಕರು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.

11) ವಾರ್ಡ್ ವ್ಯಾಪ್ತಿಯ ಸಾರ್ವಜನಿಕರು, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಲು ಅನುವಾಗುವಂತೆ ಸೂಚನಾ ಫಲಕಕ್ಕೆ ಅಳವಡಿಸಲು

12) ಎಲ್ಲಾ ವಾರ್ಡ್ ಕಮಿಟಿ ಸದಸ್ಯರುಗಳಿಗೆ.



Scanned with CamScanner